**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ,**
**ಶೋರಾಪುರ.**
**ಸಿ.ಸಿ. ನಂ.22/2025**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಹಣಮಂತಿ | ಚಾಸಾ ಃ 01 |
| ಗಂಡ ಹೆಸರು | ಃ ಹನಮಂತ | ಪ್ರಾಸಾ ಃ 06 |
| ವಯಸ್ಸು | ಃ 36 ವರ್ಷ | |
| ವೃತ್ತಿ | ಃ ಕೂಲಿ ಕೆಲಸ | |
| ವಾಸ ಸ್ಥಳ | ಃ ಮಂಗಳೂರು | |

**ಸಾಕ್ಷಿಗೆ ಇಂದು ದಿನಾಂಕಃ 30.04.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ**

ಚಾಸಾ-4 ನನ್ನ ಅಕ್ಕಳಾಗಬೇಕು, ಚಾಸಾ-5 ನನ್ನ ಮೈದುನ ಸದರಿಯವರು ನನಗೆ ಪರಿಚಯ ಇರುತ್ತಾರೆ. ಆರೋಪಿತರು ನಮ್ಮ ಸಂಬಂಧಿಕರು ಆಗಬೇಕು. ನಮ್ಮ ಜಮೀನು ಊರ ಪಕ್ಕದಲ್ಲಿ ಇರುತ್ತದೆ. ಸದರಿ ಹೊಲದಲ್ಲಿ ಹತ್ತಿ ಬೆಳೆ ಬೆಳೆದಿರುತ್ತೇವೆ. ಈಗ 2 ವರ್ಷಗಳ ಹಿಂದೆ ಸಂಜೆ 6 ಗಂಟೆಗೆ ಆರೋಪಿತರ ಕುರಿ ನಮ್ಮ ಹೊಲದಲ್ಲಿ ಹತ್ತಿ ಬೆಳೆಯನ್ನು ಮೇಯಿತ್ತಿದ್ದವು. ಆಗ ನಾನು ಮತ್ತು ಚಾಸಾ-4 ರವರು ಸದರಿ ಕುರಿಗಳನ್ನು ಆರೋಪಿತರ ಮನೆಗೆ ಹೊಡೆದುಕೊಂಡು ಹೋಗಿ ನಿಮ್ಮ ಕುರಿಗಳನ್ನು ಕಟ್ಟಿ ಹಾಕಿ ಎಂದು ಹೇಳಿದೆವು. ಆಗ ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದು, ನನ್ನ ಕೂದಲು ಹಿಡಿದು ನೆಲಕ್ಕೆ ಹಾಕಿ ಒದ್ದಳು. 2 ನೇ ಆರೋಪಿತನು ಒಂದು ಬಡಿಗೆಯಿಂದ ನನ್ನ ಬೆನ್ನಿಗೆ ಹೊಡೆದಿರುತ್ತಾನೆ. ಆಗ ಚಾಸಾ-4 ಮತ್ತು 5 ರವರು ಜಗಳ ಬಿಡಿಸಿದರು. ನಂತರ ಆರೋಪಿತರು ನಮ್ಮ ತಂಟೆಗೆ ಇನ್ನೊಮ್ಮೆ ಬಂದರೆ ನಿಮ್ಮನು ಸಾಯಿ ಹೊಡೆಯುತ್ತೇವೆ ಎಂದು ಜೀವಬೇದರಿಕೆ ಹಾಕಿರುತ್ತಾರೆ. ನಂತರ ಹಿರಿಯರ ಸಮುಖದಲ್ಲಿ ಪಂಚಾಯತಿ ಮಾಡಿ ಎರಡು ದಿನಗಳ ನಂತರ ದೂರನ್ನು ಸಲ್ಲಿಸಿರುತ್ತೇನೆ. ಈಗ ನಾನು ನೋಡುತ್ತಿರುವ ದೂರಿನ ಮೇಲೆ ನಾನು ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ. ಸದರಿ ದೂರನ್ನು ಈಗಾಗಲೇ ನಿಪಿ-7 ಎಂದು ಗುರುತಾಗಿರುತ್ತದೆ.

02. ದೂರು ನೀಡಿದ ದಿನ ಪೋಲೀಸರು ಘಟನಾ ಸ್ಥಳಕ್ಕೆ ಬಂದು ಚಾಸಾ-2 ಮತ್ತು 3 ರವರು ಸಮಕ್ಷಮ,

ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿ ಪಂಚರ ಸಹಿ ಪಡೆದು, ನನ್ನ ಹೆಬ್ಬೆಟ್ಟಿನ ಗುರುತನ್ನು ಪಡೆದಿರುತ್ತಾರೆ. ಸದರಿ ಪಂಚನಾಮೆ ಕಾಲಕ್ಕೆ ಒಂದು ಬಡಿಗೆಯನ್ನು ಜಪ್ತು ಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತ್ತಾಗಿರುತ್ತದೆ. ಪಂಚನಾಮೆ ಕಾಲಕ್ಕೆ ತೆಗೆದ ಛಾಯಾಚಿತ್ರದಲ್ಲಿ ನಾನು ಇದ್ದು, ಅದು ಈಗಾಗಲೇ ನಿಪಿ-2 ಎಂದು ಗುರುತಾಗಿರುತ್ತದೆ. ನ್ಯಾಯಾಲಯದ ಮುಂದೆ ಇರುವ ಬಡಿಗೆಯನ್ನು ಗುರುತ್ತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸುತ್ತೇನೆ.

<u>**ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಎಂ.ಎಸ್.ಎಂ ವಕೀಲರಿಂದಃ**</u>

ನಾನು ಶಾಲೆ ಕಲಿತ್ತಿರುವುದಿಲ್ಲ. ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ನಮ್ಮ ಊರಲ್ಲಿಯೇ ಕೂಲಿ ಕೆಲಸ ಮಾಡುತ್ತೇನೆ. ಚಾಸಾ-2 ನನಗೆ ಅಜ್ಜನಾಗಬೇಕು. ಚಾಸಾ-3 ನನಗೆ ಚಿಕ್ಕಪ್ಪನಾಗಬೇಕು. ನಮ್ಮ ಜಮೀನು 4 ಎಕರೆ ಇರುತ್ತದೆ. ಚಾಸಾ-4 ರವರಿಗೆ 6 ಎಕರೆ ಇರುತ್ತದೆ. ನಮ್ಮ ಹೊಲ ಮತ್ತು ಚಾಸಾ-4 ರವರ ಹೊಲ ಎರಡು ಹೊಲಗಳನ್ನು ಬಿಟ್ಟು ಇರುತ್ತವೆ. ನಮ್ಮ ಹೊಲವನ್ನು ಅವರ ಮನೆಯವರೇ ಬಿತ್ತುತ್ತಾರೆ ಎಂದರೆ ಸರಿ. ಚಾಸಾ-4 ರವರ ಮಗನಿಗೆ 1 ನೇ ಆರೋಪಿತಳ ಚಿಕ್ಕಮ್ಮನ ಮಗಳನ್ನು ಕೊಡಬೇಕಾಗಿ ಮಾತುಕತೆ ಆಗಿತ್ತು ಎಂದರೆ ನಿಜ. ಆದಾದ ನಂತರ ಚಾಸಾ-4 ಮತ್ತು ಆರೋಪಿತರಿಗೆ ವೈಮನಸ್ಸು ಆಗಿ ಜಗಳವಾಗುತ್ತಿತ್ತು ಎಂದರೆ ನಿಜ. ಆರೋಪಿತರು ಮೊದಲು ಚಾಸಾ-4 ಮತ್ತು ಅವರ ಕುಟುಂದವರ ಮೇಲೆ ದೂರನ್ನು ದಾಖಲಿಸಿದ್ದರು ಎಂದರೆ ಸರಿ. ಆರೋಪಿತರು ಚಾಸಾ-4 ರವರ ಮೇಲೆ ದೂರು ದಾಖಲಿಸಿದ ವಿಷಯ ನನಗೆ 2 ದಿನಗಳ ನಂತರ ನನಗೆ ಗೊತ್ತಾಗಿರುತ್ತದೆ. ಚಾಸಾ-4 ಮತ್ತು 1 ನೇ ಆರೋಪಿತರು ಜಗಳವಾಡುವ ಸಮಯದಲ್ಲಿ ನಾನು ಹಾಜರು ಇರಲಿಲ್ಲ ಎಂದರೆ ಸರಿ. ಮೊದಲು 1 ನೇ ಆರೋಪಿತಳು ನಮ್ಮ ಮೇಲೆ ದೂರು ದಾಖಲಿಸಿದಕ್ಕೆ ಚಾಸಾ-4 ರವರ ಮಾತು ಕೇಳಿ ನಾನು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಬೇಸಿಗೆ ಸಮಯದಲ್ಲಿ ಹೊಲದಲ್ಲಿ ಯಾವುದೇ ಬೆಳೆ ಇರುವುದಿಲ್ಲ ಎಂದರೆ ಸರಿ. ಜೂನ್ ತಿಂಗಳಿನಿಂದ ಹೊಲ ಬಿತ್ತಲಿಕ್ಕೆ ಪ್ರಾರಂಭವಾಗುತ್ತದ ಎಂದರೆ ಸರಿ. ನಮ್ಮ ಮನೆಯಿಂದ ನಮ್ಮ ಹೊಲ 2 ಕಿ.ಮಿ ಆಗುತ್ತದೆ. ನಮ್ಮ ಹೊಲದಿಂದ ಮನೆಗೆ ಬರಲು ಅರ್ದ ಗಂಟೆ ಬೇಕಾಗುತ್ತದೆ. ದೂರನ್ನು ಬೆರಳಚ್ಚು ಮಾಡಿಸಿ ಪೋಲೀಸರು ತೆಗೆದುಕೊಂಡಿರುತ್ತಾರೆ. ಅವರು ಸಹಿ ಮಾಡು ಅಂದಿದ್ದರಿಂದ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಯಾವುದೇ ಘಟನೆ ಆಗಿರುವುದಿಲ್ಲ, ನಾನು

ಚಾಸಾ-4 ರವರ ಮಾತು ಕೇಳಿ ಆರೋಪಿತರ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಂತರ ಅದೇದಿನ ಪೋಲೀಸರು ಘಟನೆ ಸ್ಥಳಕ್ಕೆ ಬಂದಿರುವುದಿಲ್ಲ, ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚಾನಮೆ ಮಾಡಿರುವುದಿಲ್ಲ. ಯಾವುದೇ ವಸ್ತುಗಳನ್ನು ಜಪ್ತು ಪಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ** ಃ ಇಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.